ಶ್ರೀ ಮಸೋಹರ್ ಐನಾಪುರ:- ಈ ವಿಚಾರವಾಗಿ ಮಾನ್ಯ ಸಚಿವರು ಏನು ಹೇಳಿದ್ದಾರೆ, Rs.927.57 crores is proposed for the Upper Krishna Project. Out of the proposed Rs.927.57 crores, whether the Government is in a position to release the entire amount in the 8th Five-year Plan. Second question is, as to when this project can be completed, because we should not meet the fate of the Cauvery, because by 2000 A.D., we have to utilise the water. As Hon. Leader of the Oposition Mr. Chandre Gowda said, we should not meet the fate of the Cauvery, we should utilise the water in Krishna.

ಅದಕ್ಕೋಸ್ಕರವಾಗಿ ಮಾನ್ಯ ಸಚಿವರಲ್ಲಿ ವಿನಂತಿ ಮಾಡಿಕೊಳ್ಳುವುದೇನೆಂದರೆ, ಬಿಜಾಪುರ ಜಿಲ್ಲೆಯಲ್ಲಿ ಕೃಷ್ಣಾ ನದಿಯ ಕಮ್ಯಾಂಡ್ ಏರಿಯಾದಲ್ಲಿ ಬರತಕ್ಕ ಇಂಡಿ ಮತ್ತು ಸಿಂಧಗಿ ತಾಲ್ಲೂಕಿನಲ್ಲಿ ಯಾವ ಕಾಮಗಾರಿಗಳನ್ನೂ ತೆಗೆದುಕೊಳ್ಳುವುದಕ್ಕೆ ಬರುತ್ತಾ ಇಲ್ಲ, ಈ ಕಡೆ ಕೃಷ್ಣಾ ಮೇಲ್ಗಡೆ ಪೂರ್ತಿಯಾಗುತ್ತಾ ಇಲ್ಲ, ಮತ್ತೊಂದು, ನಾನು ಏಕೆ ಹೇಳುತ್ತಿದ್ದೇನೆಂದರೆ....

ಅಧ್ಯಕ್ಷರು:- ಮಲ್ಲಾರಿಗೌಡ ಪಾಟೀಲರ ಡಿಮ್ಯಾಂಡ್ ಬರುತ್ತಾ ಇದೆ, ಇದನ್ನು ಆಗ ಹೇಳಿ.

ಪಂಚಾಯಿತಿ ವ್ಯಾಪ್ತಿಯೊಳಗೆ ಬರುವ ಕಟ್ಟಡಗಳಿಗೆ ವಿದ್ಯುಚ್ಛಕ್ತಿಯ ಸರಬರಾಜು.

116 (639), ಶ್ರೀ ಬಿ.ಐ. ಪಾಟೀಲ್ (ಉಚಗಾಂವ):- ಮಾನ್ಯ ವಸತಿ ಮತ್ತು ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಮಂಡಲ ಪಂಚಾಯಿತಿ ವ್ಯಾಪ್ತಿಯೊಳಗೆ ಬರುವ ಕಟ್ಟಡಗಳಿಗೆ ನಗರಾಭಿವೃದ್ಧಿ ಅಥವಾ ತಹಶೀಲ್ದಾರ್‌ರವರ ಅನುಮತಿ ಇಲ್ಲದೆ ವಿದ್ಯುಚ್ಛಕ್ತಿಯನ್ನು ಸರಬರಾಜು ಮಾಡುತ್ತಿರುವುದು ನಿಜವೇ?

ಆ) ಹಾಗಿದ್ದಲ್ಲಿ, ಆ ಪದ್ಧತಿಯಲ್ಲಿ ಏನಾದರೂ ಬದಲಾವಣೆ ಇವೆಯೇ? ಅದಕ್ಕೆ ಕಾರಣಗಳೇನು?

ಶ್ರೀ ಕೆ.ಜೆ. ಜಾರ್ಜ್ (ವಸತಿ ಮತ್ತು ನಗರಾಭಿವೃದ್ಧಿ ಸಚಿವರು):-

ಅ) ಹೌದು

ಆ) ಹೌದು, ಪದ್ಧತಿಯಲ್ಲಿ ಬದಲಾವಣೆ ಇದೆ. ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಗೆ ಅನಧಿಕೃತ ಕಟ್ಟಡಗಳಿಗೆ ವಿದ್ಯುಚ್ಛಕ್ತಿ ಸರಬರಾಜು ಮಾಡಬಾರದೆಂದು ನಿರ್ದೇಶನ ನೀಡಲಾಗುವುದು.

SRI B.I. PATIL:- In what UD Athe matter of electrification to Manda Panchayat is related? My second question is whether the Government will follow the earlier policy to avoid hardship to the public.

SRI K.J. GEORGE:- When we declare the lands under Urban Development Authorities, the land between the Corporation limit and the green-belt will come under the jurisdiction of each Urban Development Authority. Eventhough there are some Mandal Panchayats, they can only control gramthanas. Wherever gramthana land is there, the concerned Mandal Panchayat can give licence for the construction of buildings. But, unfortunately, in many places where the lands come under the jurisdiction of the Urban Development Authorities, the lands have been converted into residential purpose and Mandal Panchayats are giving licences for construction of buildings. That is unauthorised construction. That is why we instructed the KEB people that before giving electricity to such

residential buildings they should take prior permission of the Urban Development Authority concerned.

SRI B.I. PATIL:- What are the reasons? The Act came in 1985 and so many unauthorised constructions have come. At that time the Mandal Panchayats have given no objection certificates. As such, why don't you adopt the previous system?

SRI K.J. GEORGE:- As per the CDP they can only obtain licence from the concerned Urban Development Authority. Only for Grama-Thanas the Mandal Panchayat has the power to issue licence. Other than gramathanas, they have to take permission from the concerned Urban Development Authority.

SRI D.B. CHANDRE GOWDA:- It is a very important question. There is a difference between urban cities and rural areas. Particularly in Maland Areas.

ಈಗ ಗ್ರಾಮಠಾಣಾ ಹೆಸರಿನಲ್ಲಿ, ಪಕ್ಕದಲ್ಲಿ ಇಲ್ಲಿಂದ ಆಷ್ಟುದೂರಕ್ಕೆ ಮನೆ ಇದ್ದರೂ ಕೂಡ ಅದು ಗ್ರಾಮಠಾಣಾದಲ್ಲಿದೆ, ನಾವು ಕೊಡುವುದಿಲ್ಲ ಎಂದು ಕೆ.ಇ.ಬಿ. ಯವರು ಹೇಳುತ್ತಾರೆ. ಮಂಡಲ್ ಪಂಚಾಯತಿಯವರು ಅದನ್ನು ಸರ್ವೆ ಮಾಡಲಾರದ ಸ್ಥಿತಿಯಲ್ಲಿದ್ದಾರೆ. ಆದುದರಿಂದ ಇದನ್ನು ಲಿಬರಲೈಸ್ ಮಾಡಬೇಕು. ಅರ್ಬನ್ ಈಸ್ ಡಿಫರೆಂಟ್. ಇಂಗ್ಲೀಷ್‌ನಲ್ಲಿ ಪ್ರಶ್ನೆ ಒಂದುರೀತಿ ಇದೆ. ಕನ್ನಡದಲ್ಲಿ ಅದನ್ನು ಬಹಳ ಸೊಗಸಾಗಿ ತರ್ಜುಮೆ ಮಾಡಿಬಿಟ್ಟಿದ್ದಾರೆ, ಏನೂ ಸಂಬಂಧ ಇಲ್ಲದಹಾಗೆ ಮಾಡಿ ಬಿಟ್ಟಿದ್ದಾರೆ. ಇಂಗ್ಲೀಷ್‌ನಲ್ಲಿ Whether it is a fact that earlier electrification has been granted to the residents who have constructed buildings within the jurisdiction of Mandal Panchayat without the permission of the Urban Development Authority or Tahsildar?

ಈ ರೀತಿ ಇದ್ದರೆ, ಇದನ್ನು ಹೀಗೆ ತರ್ಜುಮೆ ಮಾಡಿದ್ದಾರೆ. 'ಮಂಡಲ್ ಪಂಚಾಯತ್ ವ್ಯಾಪ್ತಿಯೊಳಗೆ ಬರುವ ಕಟ್ಟಡಗಳು' ಎಂದು ಇದೆ. ಇವು ಇಲ್ಲವೇ ಇಲ್ಲ, ನಗರಾಭಿವೃದ್ಧಿ ಪ್ರಾಧಿಕಾರ ಅಥವಾ ತಹಸೀಲ್ದಾರ್‌ರ ಅನುಮತಿಯಿಲ್ಲದೆ ನಿಮ್ಮುಚ್ಚಕ್ತಿ ಸರಬರಾಜು ಮಾಡುತ್ತಿರುವುದು ನಿಜವೇ? ಎಂದು ಇದೆ, ಇಲ್ಲಿ ಪ್ರಶ್ನೆ ಇಂಗ್ಲೀಷ್‌ನಲ್ಲಿ ಏನು ಹೇಳಿದ್ದಾರೆ ಅದು ಬೇರೆ ಇದೆ, ಕನ್ನಡ ಪ್ರಶ್ನೆ ಬೇರೆಯೇ ಇದೆ. ಮಂಡಲ್ ಪಂಚಾಯಿತಿ ವ್ಯಾಪ್ತಿಯೊಳಗೆ ಬರುವ ಕಟ್ಟಡಗಳು, ಅದಕ್ಕೆ ನಿಮಗೆ ಏನೂ ಸಂಬಂಧ ಇಲ್ಲ, ಆದರೆ ನಾನು ಕೇಳುತ್ತಿದ್ದೇನೆ, ಮಂಡಲ್ ಪಂಚಾಯಿತಿ ವ್ಯಾಪ್ತಿಯೊಳಗೆ ಬರುವ ಕಟ್ಟಡಗಳಿಗೆ, ಮಂಡಲ್‌ಗಳು ಈಗೇನು ತಹಸೀಲ್ದಾರರ ಆಡಳಿತದಲ್ಲಿ ಇವೆ, ಅವರು ಮ್ಯಾಪ್ ತೆಗೆದುಕೊಂಡು ಹೋಗಿ ತೋರಿಸಿದರೂ ಕೂಡ ತಹಸೀಲ್ದಾರ್ ಈಸ್ ಹೆಲ್ಪ್‌ಲೆಸ್. ಇದು ನೆಕ್ಸ್ಟ್ ಡೋರ್‌ನಲ್ಲಿ ಕರೆಂಟ್ ಇದೆ, ಬಟ್ ವಿಲೇಜ್‌ನಲ್ಲಿ ಅದನ್ನು ಕೊಡುತ್ತಿಲ್ಲ. Next door there is current but in the village there is no current. Please try to understand our problem and convey our views to the Electricity Minister or the Authorities concerned.

ಶ್ರೀ ಕೆ.ಜೆ. ಜಾರ್ಜ್:- ಮಾನ್ಯ ಅಧ್ಯಕ್ಷರೇ, ಇದು ಏನೆಂದು ಹೇಳಿದರೆ, ಅರ್ಬನ್ ಡೆವಲಪ್‌ಮೆಂಟ್ ಅಥಾರಿಟಿ ಇರುತ್ತದೆ. ಉದಾಹರಣೆಗೆ ಬೆಂಗಳೂರು ಡೆವೆಲಪ್‌ಮೆಂಟ್ ಅಥಾರಿಟಿ, ಬೆಳಗಾಂ ಡೆವೆಲಪ್‌ಮೆಂಟ್ ಅಥಾರಿಟಿ ಇರುತ್ತದೆ. ಅವರಿಗೇನು ಜ್ಯೂರಿಸ್‌ಡಿಕ್ಷನ್ ಎಂದು ಹೇಳಿದರೆ, ಬೆಂಗಳೂರು ಸಿಟಿ ಕಾರ್ಪೊರೇಷನ್ ಇದು ಒಂದು, ನಂತರ ಗ್ರೀನ್ ಬೆಲ್ಟ್, ಇದರ ಮಧ್ಯದಲ್ಲಿ ಬರತಕ್ಕದ್ದು ಎಲ್ಲಾ ಅರ್ಬನ್ ಡೆವೆಲಪ್‌ಮೆಂಟ್ ಅಥಾರಿಟಿ ಕೆಳಗೆ ಬರುತ್ತದೆ. ಅದರ ಮಧ್ಯದಲ್ಲಿ ಮಂಡಲ್ ಪಂಚಾಯತ್‌ಗೆ ಸೇರುವ ಗ್ರಾಮಠಾಣ ಇರುತ್ತದೆ. ಗ್ರಾಮಠಾಣಾದಲ್ಲಿ ಅನುಮತಿ ಕೊಡುವುದಕ್ಕೆ ಮಂಡಲ್ ಪಂಚಾಯತ್ಗೆ ಪವರ್ ಇದೆ. ಈಗೇನು ಮಾಡುತ್ತಾರೆ ಎಂದರೆ, ಉದಾಹರಣೆಗೆ ಬೆಂಗಳೂರು ನಗರದಲ್ಲಿ ಮಂಡಲ್ ಪಂಚಾಯತ್ ವ್ಯಾಪ್ತಿಯಲ್ಲಿ ಬರುವ ಅಗ್ರಿಕಲ್ಚರಲ್ ಲ್ಯಾಂಡ್ಸ್ ಇರುತ್ತವೆ. ಇದು ಕನ್‌ವರ್ಟ್ ಆಗಿರುತ್ತದೆ. ರೆಸಿಡೆನ್ಷಿಯಲ್‌ಗೆ ಇದು ಕನ್‌ವರ್ಟ್ ಆಗಿ, ರೆಸಿಡೆನ್ಷಿಯಲ್‌ಗೆ ಬರುವುದಕ್ಕೆ ಮುಂಚೆ ಮಂಡಲ್ ಪಂಚಾಯತ್‌ಗೆ ಕೊಡುವ ಪವರ್ಸ್ ಇಲ್ಲ, ಅದನ್ನು ಕೊಡಬೇಕೆಂದು ಹೇಳಿದರೆ, ಅರ್ಬನ್

ಡೆವಲಪ್‌ಮೆಂಟ್ ಅಥಾರಿಟಿಗೆ ಬರಬೇಕು. ಏತಕ್ಕೆಂದರೆ, ಪ್ಲಾನ್ಡ್ ಡೆವೆಲಪ್‌ಮೆಂಟ್ ಆಗಬೇಕಾಗುತ್ತದೆ. ಆದುದರಿಂದ ಇದು ಮಾಡುತ್ತೇವೆ.

SRI B.I. PATIL:- For Mandal Panchayats, Zilla Parishat rules are there. Therefore, Mandal Panchayats are giving licence and electrification is going on.

SRI K.J. GEORGE:- Wherever the Urban Development Authorities are there, there the Mandal Panchayats cannot give licences. The other Mandal Panchayats can give licence we are not coming in their way. Wherever Urban Development Authority jurisdiction will come, there only they have to take prior approval. Already CDP is there, byelaws are there. They have to construct according to CDP and the byelaws.

ಐ.ಡಿ.ಎಸ್.ಎಂ.ಟಿ. ಕೇಂದ್ರ ಯೋಜನೆ.

120 (932). ಶ್ರೀ ಪೆಚ್. ವಿಶ್ವನಾಥ (ಕೆ.ಆರ್.ನಗರ):- ಮಾನ್ಯ ವಸತಿ ಮತ್ತು ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕೃಷ್ಣರಾಜನಗರ ಪಟ್ಟಣವನ್ನು ಐ.ಡಿ.ಎಸ್.ಎಂ.ಟಿ. ಕೇಂದ್ರ ಯೋಜನೆಯಲ್ಲಿ ಅಭಿವೃದ್ಧಿಗಾಗಿ ಆಳವಡಿಸಲು ಕೇಂದ್ರ ಸರ್ಕಾರಕ್ಕೆ ಶಿಫಾರಸ್ಸು ಮಾಡಲಾಗಿದೆಯೇ?

ಆ) ಮಾಡಿದ್ದಲ್ಲಿ ಶಿಫಾರಸ್ಸಿನ ಅಂದಾಜು ವೆಚ್ಚ ಎಷ್ಟು?

ಇ) ಪ್ರಸ್ತುತ ವರ್ಷದಲ್ಲೇ ಮಂಜೂರಾತಿ ನೀಡಿ ಕಾರ್ಯಾರಂಭ ಮಾಡಲಾಗುವುದೇ?

ಶ್ರೀ ಕೆ.ಜೆ. ಜಾರ್ಜ್ (ವಸತಿ ಮತ್ತು ನಗರಾಭಿವೃದ್ಧಿ ಸಚಿವರು):-

ಅ) ಹೌದು.

ಆ) ಯೋಜನಾ ವರದಿ ತಯಾರಿಸಲಾಗುತ್ತಿದೆ. ಇದು ಪೂರ್ಣಗೊಂಡ ನಂತರ ಅಂದಾಜು ವೆಚ್ಚ ಗೊತ್ತಾಗುವುದು.

ಇ) ಕೇಂದ್ರ ಸರ್ಕಾರದಿಂದ ಸಾಲ ಬಿಡುಗಡೆಯಾದ ನಂತರ ಕಾರ್ಯ ಪ್ರಾರಂಭ ಮಾಡಲಾಗುವುದು.

ಶ್ರೀ ಪೆಚ್. ವಿಶ್ವನಾಥ್:- ಮಾನ್ಯ ಅಧ್ಯಕ್ಷರೆ, ಮಾನ್ಯ ಮಂತ್ರಿಗಳು ಯೋಜನಾ ವರದಿ ತಯಾರಿಸಲಾಗುತ್ತಿದೆ ಎಂದು ಹೇಳಿದ್ದಾರೆ. ಯೋಜನೆ ಬಗ್ಗೆ ನಾನು ರಾಜ್ಯದ ಕೆಲವು ಕಛೇರಿಗಳಿಗೆ ಮತ್ತು ದೆಹಲಿಗೂ ಕೂಡ ಹೋಗಿ ಬಂದಿದ್ದೇನೆ. ನಮ್ಮ ಮುನಿಸಿಪಲ್ ಅಡ್ಮಿನಿಸ್ಟ್ರೇಷನ್ ಡೈರೆಕ್ಟರೇಟ್ ನವರು ಇದು ನಮಗೆ ಸಂಬಂಧ ಇಲ್ಲ ಎಂದು ಹೇಳುತ್ತಾರೆ. ನೀವು ಟೌನ್ ಪ್ಲಾನಿಂಗ್ ಡೆವಲಪ್‌ಮೆಂಟ್‌ನವರನ್ನು ಕೇಳಿ ಎಂದು ಹೇಳುತ್ತಾರೆ. ಟೌನ್ ಪ್ಲಾನಿಂಗ್ ಡೆವಲಪ್‌ಮೆಂಟ್‌ನವರನ್ನು ಕೇಳಿದರೆ ಇದು ನಮಗೆ ಸಂಬಂಧಪಟ್ಟಿಲ್ಲ ಮುನಿಸಿಪಲ್ ಅಡ್ಮಿನಿಸ್ಟ್ರೇಷನ್ ಡೆವ ಲಪ್‌ಮೆಂಟ್‌ನವರನ್ನು ಕೇಳಿ ಎಂದು ಹೇಳುತ್ತಾರೆ. ದೆಹಲಿಯಲ್ಲೂ ಸಹ ಕರ್ನಾಟಕದವರಿಗೆ ಐ.ಡಿ.ಎಸ್.ಎಂ.ಟಿ. ಸ್ಕೀಮ್‌ನಲ್ಲಿ ಹಣ ಕೊಟ್ಟಿದ್ದೇವೆ. ಅವರು 5 ಕೋಟಿ ರೂಪಾಯಿಗಳ ಹಣ ಇದುವರೆಗೂ ಉಪಯೋಗಿಸಿಕೊಂಡಿಲ್ಲ, ಕರ್ನಾಟಕದವರಿಗೆ ಹಣ ಉಪಯೋಗಿಸಿಕೊಳ್ಳುವುದಕ್ಕೆ ಗೊತ್ತಿಲ್ಲ ಎಂದು ಆ ಡೈರೆಕ್ಟರೇಟ್‌ನವರು ಹೇಳುತ್ತಾರೆ. ಆದ್ದರಿಂದ ದಯಮಾಡಿ ಯೋಜನಾ ವರದಿ ಮುನಿಸಿಪಲ್ ಅಡ್ಮಿನಿಸ್ಟ್ರೇಷನ್‌ನಲ್ಲಿ ತಯಾರು ಮಾಡುತ್ತಾರೋ ಅಥವಾ ಟೌನ್ ಪ್ಲಾನಿಂಗ್ ಡೆವಲಪ್‌ಮೆಂಟ್‌ನಲ್ಲಿ ತಯಾರು ಮಾಡುತ್ತಾರೋ? ಯಾವಾಗ ತಯಾರು ಮಾಡುತ್ತಾರೆ? ಯಾವಾಗ ಚಾಲು ಮಾಡುತ್ತೀರಿ ಹೇಳಿ.

ಶ್ರೀ ಕೆ.ಜೆ. ಜಾರ್ಜ್:- ಮಾನ್ಯ ಅಧ್ಯಕ್ಷರೆ, ಇದು ಸೆಂಟ್ರಲ್ ಗೌರ್ಮೆಂಟ್ ಸ್ಪಾನ್‌ಸಾರ್ಡ್ ಸ್ಕೀಮ್ ಐ.ಡಿ.ಎಸ್.ಎಂ.ಟಿ. ಎಂದು ಹೇಳಿ. ಇದರಲ್ಲಿ 50.50 ಮಾಡಿದ್ದೇವೆ. ಈಗಾಗಲೇ ಸುಮಾರು 27 ಟೌನ್‌ಗಳನ್ನು ನಾವು ತೆಗೆದುಕೊಂಡಿದ್ದೇವೆ. ಇದರಲ್ಲಿ ಕೆಲವು ಡೆವಲಪ್‌ಮೆಂಟ್ ವರ್ಕ್ಸ್ ಸೆಲೆಕ್ಟೆಡ್ ಟೌನ್ಸ್‌ಗೆ ಅನ್ವಯಿಸುತ್ತದೆ. ಅದರ ಪ್ರಕಾರ ರಸ್ತೆಗಳನ್ನು ಮಾಡುವುದು, ಮಂಡೀಸ್ ಮಾಡುವುದು, ಮಾರ್ಕೆಟ್ ಸ್ಯಾನಿಟೇಶನ್‌ಗೆ ಎಂದು ಹೇಳಿ